ಓ.ಎಸ್.83/2020
ಡಿ.ಡಬ್ಲ್ಯೂ-1

ದಿನಾಂಕಃ **02.07.2026** ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ವಿ.ಎಸ್.ಕೆ. ವಕೀಲರಿಂದಃ

ವಾದಿಗಳು, 1 ಮತ್ತು 2 ನೇ ಪ್ರತಿವಾದಿಗಳು ತಿಪ್ಪೆಲಿಂಗಪ್ಪನ ಮಕ್ಕಳು ಎಂದರೆ ಸರಿ. ದಾವಾ ಸ್ವತ್ತುಗಳು ತಿಪ್ಪೆಲಿಂಗಪ್ಪ ಮತ್ತು ಗಿರಿಯಮ್ಮರವರಿಗೆ ಸೇರಿದ್ದಂತಹ ಆಸ್ತಿಗಳು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ತಿಪ್ಪೆಲಿಂಗಪ್ಪನವರಿಗೆ ಸೇರಿದಂತಹ ಆಸ್ತಿಗಳು ಎಂದು ಉತ್ತರಿಸುತ್ತಾರೆ. ದಾವಾ 3 ನೇ ಸ್ವತ್ತು ತಿಪ್ಪೆಲಿಂಗಪ್ಪರವರ ಪಿತ್ರಾರ್ಜಿತ ಆಸ್ತಿ ಎಂದು ಸೂಚಿಸುವುದು ಸರಿಯಲ್ಲ. ತಿಪ್ಪೆಲಿಂಗಪ್ಪರವರು ಪಿತ್ರಾರ್ಜಿತ ಆಸ್ತಿಗಳು ಮತ್ತು ಒಟ್ಟು ಕುಟುಂಬದ ಆಸ್ತಿಗಳಿಂದ ಬಂದ ಆದಾಯದಿಂದ ತಿಪ್ಪೆಲಿಂಗಪ್ಪನವರು ದಾವಾ 3 ನೇ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ 3 ನೇ ಸ್ವತ್ತು ತಿಪ್ಪೆಲಿಂಗಪ್ಪರವರ ಸ್ವಯಾರ್ಜಿತ ಆಸ್ತಿ ಎಂದು ಉತ್ತರಿಸುತ್ತಾರೆ. ತಿಪ್ಪೆಲಿಂಗಪ್ಪರವರು ವ್ಯವಸಾಯ ಮಾಡುತ್ತಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿ ತಿಪ್ಪೆಲಿಂಗಪ್ಪನವರು ವ್ಯವಸಾಯದೊಂದಿಗೆ ಅಡಿಕೆ ಮತ್ತು ಹುಣಸೆಹಣ್ಣಿನ ವ್ಯಾಪಾರ ಮಾಡುತ್ತಿದ್ದರು ಎಂದು ಉತ್ತರಿಸುತ್ತಾರೆ. ತಿಪ್ಪೆಲಿಂಗಪ್ಪರವರು ಅಡಿಕೆ ಮತ್ತು ಹುಣಸೆಹಣ್ಣಿನ ವ್ಯಾಪಾರ ಮಾಡುತ್ತಿದ್ದ ಬಗ್ಗೆ ದಾಖಲೆ ಇರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ತಿಪ್ಪೆಲಿಂಗಪ್ಪ ವ್ಯಾಪಾರ ಮಾಡುತ್ತಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ.

2. ದಾವಾ 3 ನೇ ಸ್ವತ್ತನ್ನು 1991-92 ರಲ್ಲಿ ನನ್ನ ತಾತ ಖರೀದಿ ಮಾಡಿರುತ್ತಾರೆ. ದಾವಾ 3 ನೇ ಸ್ವತ್ತನ್ನು 1991-92 ರಲ್ಲಿ ಖರೀದಿದಾಗ ನನ್ನ ತಾತ ವಾದಿಗಳ ಒಪ್ಪಿಗೆ ಪಡೆದುಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ದಾವಾ 3 ನೇ ಸ್ವತ್ತನ್ನು ಮಾರಾಟ ಮಾಡಲು ತಿಪ್ಪೆಲಿಂಗಪ್ಪರವರಿಗೆ ಸಂಪೂರ್ಣವಾದ ಹಕ್ಕು ಇರಲಿಲ್ಲ ಎಂದು

Shivamma

02/7/2026

ಸೂಚಿಸುವುದು ಸರಿಯಲ್ಲ. ದಾವಾ 3 ನೇ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನ ಖಾತೆ ನಮ್ಮ ಕುಟುಂಬದ ಸದಸ್ಯರ ಹೆಸರಿಗೆ ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿ. ದಾವಾ 3 ನೇ ಸ್ವತ್ತಿನ ಖಾತೆ ವರ್ಗಾವಣೆ ಮಾಡಲು ನನ್ನ ತಾತ ಸಲ್ಲಿಸಿದಂತಹ ಅರ್ಜಿ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

3. ದಾವಾ 3 ನೇ ಸ್ವತ್ತಿನಲ್ಲಿ ನಾವು ಯಾವುದೇ ಸಮಯದಲ್ಲಿ ಸ್ವಾಧೀನದಲ್ಲಿ ಇಲ್ಲದೆ ಇದ್ದರು ಸಹ ನಾವೇ ಸ್ವಾಧೀನದಲ್ಲಿ ಇರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಿ:02.12.1991 ರ ಕ್ರಯಪತ್ರವನ್ನು ನನ್ನ ತಾತ ಮತ್ತು ಸಾಕ್ಷಿದಾರರು ಶಾಮಿಲ್ ಆಗಿ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಿ:02.12.1991 ರ ಕ್ರಯಪತ್ರದ ಅಡಿಯಲ್ಲಿ ದಾವಾ 3 ನೇ ಸ್ವತ್ತಿಗೆ ಸಂಬಂಧಿಸಿದಂತೆ ನಮಗೆ ಯಾವುದೇ ಹಕ್ಕು ಬರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ 3 ನೇ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ದಾವಾ 3 ನೇ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

Shreanna

07/7/26

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ